# ಮೈಸೂರು ಮಹಾನಗರ ಪಾಲಿಕೆ, ಮೈಸೂರು

## ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರ ನಡವಳಿಗಳು

ವಿಷಯ: ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ 2025-26ನೇ ಸಾಲಿನಲ್ಲಿ ಕೊಳ್ಳೇಗಾಲ ನಗರಸಭೆಗೆ ಮೀಸಲಿರಿಸಿದ ಅನುದಾನದಡಿಯಲ್ಲಿ ತಯಾರಿಸಿರುವ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 184ಎಂಎನ್‌ಇ 2015, ಬೆಂಗಳೂರು, ದಿನಾಂಕ: 11.11.2016
2. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರ ಸಂಖ್ಯೆ:ಚಾಜಿನಕೋ/ಸಿಎಂಐಡಿಪಿ/ಸಿಆರ್/01/2025-26 ದಿ: 20-01-2026.

**********

**ಪ್ರಸ್ತಾವನೆ:**

ವಿಷಯಕ್ಕೆ ಸಂಬಂಧಿಸಿದಂತೆ ಕೊಳ್ಳೇಗಾಲ ತಾ॥ ಶ್ರೀರಂಗಪಟ್ಟಣ-ಮಲ್ಲೆ ಮಹದೇಶ್ವರ ಬೆಟ್ಟದ ರಸ್ತೆ ರಾಜ್ಯ ಹೆದ್ದಾರಿ-79ರ ಸರಪಳಿ 68.70 ರಿಂದ 69.61 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಸಿದ್ಧಪಡಿಸಿರುವ ಅಂದಾಜು ಪಟ್ಟಿಗೆ ಅನುಮೋದನೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಕೊಳ್ಳೇಗಾಲ ತಾ॥ ಶ್ರೀರಂಗಪಟ್ಟಣ-ಮಲ್ಲೆ ಮಹದೇಶ್ವರ ಬೆಟ್ಟದ ರಸ್ತೆ ರಾಜ್ಯ ಹೆದ್ದಾರಿ-79ರ ಸರಪಳಿ 68.70 ರಿಂದ 69.61 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ದಾಸನುಪುರ ಜಂಕ್ಷನ್ ರಿಂದ ಎನ್.ಹೆಚ್.-948 ಸೇರುವ ರಸ್ತೆ (ಪಶು ಇಲಾಖೆ ಕಚೇರಿ ಹತ್ತಿರ) ಕಾಮಗಾರಿ. | 150.00 |

ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 184 ಎಂಎನ್‌ಇ 2015 (ಭಾಗ-1) ಬೆಂಗಳೂರು ದಿನಾಂಕ 11-11-2016 ರಲ್ಲಿ ನೀಡಿರುವ ಅಧಿಕಾರ ಯೋಜನೆಯಂತೆ ಉಲ್ಲೇಖಿಸಿರುವ ಷರತ್ತುಗನಳಿಗೊಳಪಟ್ಟು ತಾಂತ್ರಿಕ ಮಂಜೂರಾತಿಯನ್ನು ನೀಡಲು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಮೈನಪಾ/ಉಅ(ಅ)/180/2025-26          ದಿನಾಂಕ: 02-03-2026**

ಅಧಿಕಾರ ವಿತ್ತೀಯ ದತ್ತವಾಗಿರುವಂತೆ ಕೊಳ್ಳೇಗಾಲ ತಾ॥ ಶ್ರೀರಂಗಪಟ್ಟಣ-ಮಲ್ಲೆ ಮಹದೇಶ್ವರ ಬೆಟ್ಟದ ರಸ್ತೆ ರಾಜ್ಯ ಹೆದ್ದಾರಿ-79ರ ಸರಪಳಿ 68.70 ರಿಂದ 69.61 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿಗೆ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು ತಾಂತ್ರಿಕ ಮಂಜೂರಾತಿಯನ್ನು ನೀಡಿದೆ.

| ಕ್ರ.ಸಂ | ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ತಾಂತ್ರಿಕ ಮಂಜೂರಾತಿ ಸಂಖ್ಯೆ | ಲೆಕ್ಕ ಶೀರ್ಷಿಕೆ |
|---|---|---|---|---|
| 1 | ಕೊಳ್ಳೇಗಾಲ ತಾ॥ ಶ್ರೀರಂಗಪಟ್ಟಣ-ಮಲ್ಲೆ ಮಹದೇಶ್ವರ ಬೆಟ್ಟದ ರಸ್ತೆ ರಾಜ್ಯ ಹೆದ್ದಾರಿ-79ರ ಸರಪಳಿ 68.70 ರಿಂದ 69.61 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ದಾಸನುಪುರ ಜಂಕ್ಷನ್ ರಿಂದ ಎನ್.ಹೆಚ್.-948 ಸೇರುವ ರಸ್ತೆ (ಪಶು ಇಲಾಖೆ ಕಚೇರಿ ಹತ್ತಿರ) ಕಾಮಗಾರಿ. | **150.00** | ಮೈನಪಾ/ಅಅ/ತಾಂಮಂ/178/2025-26 | ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ 2025-26ನೇ ಸಾಲು |

.....2

ಷರತ್ತುಗಳು:

1. ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರಂತೆ ಟೆಂಡರ್‌ಗಳ ಮೂಲಕ ನಿರ್ವಹಿಸತಕ್ಕದ್ದು ಹಾಗೂ ಆರ್ಥಿಕ ಇಲಾಖೆಯಿಂದ ನಿಗಧಿಪಡಿಸಿರುವ **Standard Tender Documents** ನ್ನು (ಆರ್ಥಿಕ ಇಲಾಖೆಯಿಂದ ದಿನಾಂಕ: 14-10-2008 ರ ತಿದ್ದುಪಡಿಗಳು ಒಳಗೊಂಡಂತೆ) ಅಳವಡಿಸಿಕೊಂಡು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದು.
2. ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಗುಣಮಟ್ಟ ಕಾಯ್ದಿರಿಸಿಕೊಳ್ಳತಕ್ಕದ್ದು ಹಾಗೂ ಗುಣನಿಯಂತ್ರಣಾ ತಪಾಸಣಾ ವರದಿಯನ್ನು ಪಡೆಯತಕ್ಕದ್ದು.
3. ಅಂದಾಜಿನಲ್ಲಿ ವಿದ್ಯುತ್ ಸಂಪರ್ಕಕ್ಕೆ ಬೇಕಾದ ಶುಲ್ಕ ಮತ್ತು ಪರಿವರ್ತಕಗಳ ಮೊತ್ತವನ್ನು ಇಡುಗಂಟಿನಲ್ಲಿ ಕಾಯ್ದಿರಿಸಿಕೊಳ್ಳತಕ್ಕದ್ದು.
4. ಅಂದಾಜಿನಲ್ಲಿ ಅಳವಡಿಸಿರುವ ಇಡುಗಂಟಿನ ಐಟಂಗಳಿಗೆ ಉಪಅಂದಾಜು / ದರಪಟ್ಟಿಗಳನ್ನು ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಿರ್ವಹಿಸತಕ್ಕದ್ದು.
5. ತಾಂತ್ರಿಕ ಮಂಜೂರಾತಿ ಪಡೆದ ಅಂದಾಜಿನಲ್ಲಿ ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಅಂಶಗಳನ್ನು ಬದಲಾವಣೆ ಮಾಡಿದರೆ ಈ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯತಕ್ಕದ್ದು.
6. ಈ ಅಂದಾಜು ಪಟ್ಟಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಯು ಇತರೆ ಬೇರೆ ಯಾವುದೇ ಅನುದಾನದಲ್ಲಿ ಪುನರಾವರ್ತನೆ ಆಗಿರದಂತೆ ಪರಿಶೀಲಿಸಿ ಅನುಷ್ಠಾನಗೊಳಿಸತಕ್ಕದ್ದು.
7. ಕಾಮಗಾರಿ ಪ್ರಾರಂಭಿಸುವ ಸಮಯದಲ್ಲಿ ಈ ಕಚೇರಿಗೆ ಮಾಹಿತಿ ನೀಡುವುದು.

ಅಧೀಕ್ಷಕ ಅಭಿಯಂತರರು
ಮೈಸೂರು ಮಹಾನಗರ ಪಾಲಿಕೆ,
ಮೈಸೂರು

<u>ಪ್ರತಿಯನ್ನು :</u>

1. ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜ ನಗರ ಜಿಲ್ಲೆ, ಚಾಮರಾಜ ನಗರ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜ ನಗರ ಜಿಲ್ಲೆ, ಚಾಮರಾಜ ನಗರ ಮುಂದಿನ ಕ್ರಮಕ್ಕಾಗಿ.